

## ಚೊಚ್ಚಲ ಟ್ರೋಫಿ ಕನಸು

1964ರ ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ತಂಡ ಫೈನಲ್ ಪ್ರವೇಶಿಸಿ ಇಸ್ರೇಲ್ ಎದುರು ಸೋಲು ಕಂಡು ರನ್ನರ್ಸ್ ಅಪ್ ಸ್ಥಾನ ಪಡೆದಿತ್ತು. ಅದಾದ ಬಳಿಕ ಒಮ್ಮೆಯೂ ಗುಂಪು ಹಂತ ದಾಟಿಲ್ಲ.

1956ರಿಂದ ಇದುವರೆಗೂ 17 ಸಲ ಟೂರ್ನಿ ನಡೆದಿವೆ. ಭಾರತ ಈಗ ಐದನೇ ಬಾರಿ ಅರ್ಹತೆ ಪಡೆದುಕೊಂಡಿದೆ. 1964ರಲ್ಲಿ ಭಾರತ ಫುಟ್‌ಬಾಲ್ ತಂಡವನ್ನು ಚುಬಿಮಲ್ ಗೋಸ್ವಾಮಿ ಮುನ್ನಡೆಸಿದ್ದರು. 'ಚುನಿ' ಎಂದೇ ಖ್ಯಾತನಾಮರಾಗಿದ್ದ ಚುಬಿಮಲ್ ಪ್ರಥಮ ದರ್ಜೆ ಕ್ರಿಕೆಟಿಗರೂ ಹೌದು. 1971–72ರ ರಣಜಿ ಟೂರ್ನಿಯಲ್ಲಿ ಬಂಗಾಳ ತಂಡದ ನಾಯಕರಾಗಿದ್ದರು.

ಮೂರ್ನಾಲ್ಕು ದಶಕಗಳ ಹಿಂದೆ ಭಾರತದ ಫುಟ್‌ಬಾಲ್ ತಂಡವೆಂದರೆ ಪಶ್ಚಿಮ ಬಂಗಾಳದ ತಂಡವೆಂದೇ ಕರೆಯಲಾಗುತ್ತಿತ್ತು. ಅಲ್ಲಿನ ಮೋಹನ್ ಬಾಗನ್ ಕ್ಲಬ್ ಮತ್ತು ಬಂಗಾಳದ ಆಟಗಾರರು ರಾಷ್ಟ್ರೀಯ ತಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. 1964ರ ಏಷ್ಯಾಕಪ್‌ನಲ್ಲಿ ಮೋಹನ್ ಬಾಗನ್ ಮತ್ತು ಪಶ್ಚಿಮ ಬಂಗಾಳದ ಒಂಬತ್ತು ಆಟಗಾರರು ದೇಶವನ್ನು ಪ್ರತಿನಿಧಿಸಿದ್ದರು. ಆದರೆ, ಈಗ ಪ್ರತಿಭೆಗಳು ದೇಶದ ವಿವಿಧೆಡೆಯಿಂದ ಬಂದು ರಾಷ್ಟ್ರೀಯ ತಂಡದಲ್ಲಿ ಒಂದುಗೂಡುತ್ತಿವೆ.

ಮುಂದಿನ ವರ್ಷ ನಡೆಯುವ ಏಷ್ಯಾ ಕಪ್‌ನಲ್ಲಿ ಭಾರತ ನಾಲ್ಕನೇ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತ (106 ರ್‍ಯಾಂಕಿಂಗ್), ಥಾಯ್ಲೆಂಡ್ (111), ತಜಕಿಸ್ತಾನ (114), ಹಾಂಕಾಂಗ್ (147), ಮಲೇಷ್ಯಾ (154) ಮತ್ತು ಇಂಡೋನೇಷ್ಯಾ (159) ನಮ್ಮ ದೇಶಕ್ಕಿಂತಲೂ ಕಡಿಮೆ ರ್‍ಯಾಂಕ್‌ಗಳನ್ನು ಹೊಂದಿವೆ. ಇದು ಭಾರತ ತಂಡಕ್ಕೆ ಉತ್ತಮ ಅವಕಾಶವೂ ಹೌದು. ಚುನಿ ರೀತಿಯಲ್ಲಿ ಸಾಧನೆ ಮಾಡಿ ಏಷ್ಯಾದಲ್ಲಿ ಭಾರತದ ಶಕ್ತಿ ತೋರಿಸಲು ನಾಯಕ ಸುನಿಲ್ ಚೆಟ್ರಿಗೆ ವೇದಿಕೆಯೂ ಹೌದು.

ಕಪ್ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಆಯೋಜಿಸುತ್ತದೆ. 24 ತಂಡಗಳು ಪೈಪೋಟಿ ನಡೆಸುತ್ತವೆ.

ಸದ್ಯದ ಏಷ್ಯಾ ವಲಯದ ರ್‍ಯಾಂಕಿಂಗ್ ಪಟ್ಟಿಯಲ್ಲಿ ಭಾರತ 17ನೇ ಸ್ಥಾನ ಹೊಂದಿದೆ. ಜಪಾನ್, ಇರಾನ್, ಕತಾರ್, ಉಜ್ಬೇಕಿಸ್ತಾನ್, ಚೀನಾ, ಯುನೈಟೆಡ್ ಅರಬ್ ಎಮಿರೇಟ್ಸ್, ಥಾಯ್ಲೆಂಡ್, ಜೋರ್ಡಾನ್, ಹಾಂಕಾಂಗ್, ತಜಕಿಸ್ತಾನ್ ತಂಡಗಳು ಭಾರತಕ್ಕಿಂತ ಮೇಲಿನ ಸ್ಥಾನಗಳನ್ನು ಹೊಂದಿದೆ. ಈ ತಂಡಗಳ ಸವಾಲು ಮೀರಿ ನಿಂತರೆ ಮಾತ್ರ ಏಷ್ಯಾದಲ್ಲಿ ಭಾರತದ ಸ್ಥಾನ ಗಟ್ಟಿಯಾಗಲು ಸಾಧ್ಯ.

### ದೇಶಿ ಶಕ್ತಿ

ದೇಶೀಯವಾಗಿ ಹೆಚ್ಚು ಟೂರ್ನಿಗಳು ನಡೆಯುತ್ತಿರುವುದೇ ಈಗಿನ ಭಾರತ ಫುಟ್‌ಬಾಲ್ ತಂಡದ ಸಾಧನೆಗೆ ಮೂಲ ಕಾರಣವಾಗಿದೆ.

ಐಪಿಎಲ್ ಪ್ರಭಾವದಿಂದಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) 'ಇಂಡಿಯನ್ ಸೂಪರ್ ಲೀಗ್' (ಐಎಸ್‌ಎಲ್) ಆರಂಭಿಸಿದ್ದು ಬದಲಾವಣೆಗೆ ನಾಂದಿಯಾಯಿತು.

ಇದಕ್ಕೂ ಮೊದಲು ದೇಶಿಯ ತಂಡಗಳಿಗೆ ನಡೆಯುತ್ತಿದ್ದ ಐಎಫ್‌ಎ ಶೀಲ್ಡ್ ಕಪ್, ಡುರಾಂಡೊ ಕಪ್, ಫೆಡರೇಷನ್ ಕಪ್, ಸಂತೋಷ ಟ್ರೋಫಿ, ಸುಬ್ರತೊ ಕಪ್, ಐ ಲೀಗ್ ಟೂರ್ನಿಗಳು ಹೊಸ ಆಟಗಾರರ ಉದಯಕ್ಕೆ ಕಾರಣವಾದವು.

ಐಎಸ್‌ಎಲ್ ಟೂರ್ನಿಯಲ್ಲಿ ಏಷ್ಯಾ, ಆಸ್ಟ್ರೇಲಿಯಾ, ಆಫ್ರಿಕಾ, ಯೂರೋಪ್, ಉತ್ತರ ಅಮೆರಿಕಾ ಹಾಗೂ ದಕ್ಷಿಣ ಅಮೆರಿಕ ಖಂಡಗಳ ಹಲವು ದೇಶಗಳ ಆಟಗಾರರು ಆಡಿದ್ದಾರೆ. ಹೀಗಾಗಿ ಈ ಟೂರ್ನಿ ಜಗತ್ತಿನ ಗಮನ ಸೆಳೆಯಿತು. ವಿದೇಶಿ ಆಟಗಾರರ ಜೊತೆಗೆ ಭಾರತದ ತಾರೆಯರ ಕಾಲ್ಚಳಕದ ಸೊಬಗು ಅನಾವರಣಗೊಂಡಿತು.



ಏಷ್ಯಾಕಪ್‌ನಲ್ಲಿಯೂ ಹರಿಯಲಿ ಭಾರತ ತಂಡದವರ ಈ ಹರ್ಷದ ಹೊನಲು

ವಿಶ್ವಕಪ್ ಚಾಂಪಿಯನ್ ಯೂರೋಪ್‌ನ ಅಲೆಸ್ಸಾಂಡ್ರೊ ಡೆಲ್ ಪಿಯೆರೊ ಮತ್ತು ರಾಬರ್ಟ್ ಫೈರ್ಸ್ ಅವರಂಥ ಪ್ರಸಿದ್ಧ ಆಟಗಾರರು 'ಐಎಸ್‌ಎಲ್'ನಲ್ಲಿ ಆಡಲು ಸಹಿ ಹಾಕಿದರು. ಇದು ಟೂರ್ನಿಯ ಗ್ಲಾಮರ್ ಹೆಚ್ಚಿಸಿತಲ್ಲದೇ ಆಟಗಾರರ, ಕೋಚ್‌ಗಳ ಹಾಗೂ ತಂಡದ ಸಿಬ್ಬಂದಿಗೆ ತಾರಾ ಪಟ್ಟ ತಂದುಕೊಟ್ಟಿತು. ಭಾರತದಲ್ಲಿ ಫುಟ್‌ಬಾಲ್ ನೋಡುವ ದೃಷ್ಟಿಕೋನ ಬದಲಾಯಿತು.

ಐಎಸ್‌ಎಲ್ ಸಾಕಷ್ಟು ಹಣ ಮತ್ತು ಹೂಡಿಕೆ ತಂದಿದೆ. ಇದರಿಂದ ಭಾರತದಲ್ಲಿ ಫುಟ್‌ಬಾಲ್‌ಗೆ ಬೇಕಿದ್ದ ಮೂಲಸೌಕರ್ಯಗಳು ಸುಧಾರಣೆ ಕಂಡಿವೆ. ಯೂರೋಪ್ ಮತ್ತು ದಕ್ಷಿಣ ಅಮೆರಿಕ ದ ದೊಡ್ಡ ತಾರೆಯರ ಪಾಲ್ಗೊಳ್ಳುವಿಕೆ ಫುಟ್‌ಬಾಲ್ ಅಂಗಳದ ಒಳಗೂ ಹಾಗೂ ಹೊರಗೂ ಭಾರತದ ತಾರೆಯರಿಗೆ 'ಕಿಕ್' ಕೊಟ್ಟಿದೆ.

ಹೋದ ವರ್ಷ ಕ್ಲಬ್ ಮಟ್ಟದಲ್ಲಿ ಗೋವಾ ಎಫ್‌ಸಿ ತಂಡ ಏಷ್ಯಾದ ಪ್ರೀಮಿಯರ್ ಕ್ಲಬ್ ಸ್ಪರ್ಧೆಯಾದ ಎಎಫ್‌ಸಿ ಚಾಂಪಿಯನ್ಸ್ ಲೀಗ್‌ನ ಗುಂಪು ಹಂತದಲ್ಲಿ ಭಾಗವಹಿಸಿದ ದೇಶದ ಮೊದಲ ಕ್ಲಬ್ ಎನಿಸಿತು. ಐಎಸ್‌ಎಲ್ ಬಂದ ಬಳಿಕ ಭಾರತದ ಕ್ಲಬ್‌ಗಳು ಫುಟ್‌ಬಾಲ್‌ಗೆ ಉತ್ತೇಜನ ನೀಡಲು ತಳಮಟ್ಟದಿಂದ ಹೂಡಿಕೆ ಮಾಡುತ್ತಿವೆ. ವೃತ್ತಿಪರತೆಯೂ ಹೆಚ್ಚಾಗಿದೆ.

ಜಗತ್ತಿನ ಗಮನ ಸೆಳೆಯಲು ಮೊದಲು ವಿದೇಶಿ ಆಟಗಾರರನ್ನು ಕರೆತಂದ ಭಾರತದ ಕ್ಲಬ್‌ಗಳು ಈಗ ಹಂತಹಂತವಾಗಿ ವಿದೇಶಿ ಪ್ರತಿಭೆಗಳನ್ನು ಕಡಿಮೆ ಮಾಡುತ್ತಿವೆ. ಈ ಮೂಲಕ ದೇಶಿಯವಾಗಿಯೇ ಭಾರತವನ್ನು ಫುಟ್‌ಬಾಲ್ ಶಕ್ತಿಯಾಗಿ ಬದಲಿಸುತ್ತಿವೆ. ಈಗ ಭಾರತದ ಮುಂದಿರುವ ಗುರಿ ಏಷ್ಯಾದ ರ್‍ಯಾಂಕಿಂಗ್‌ನಲ್ಲಿ ಅಗ್ರ ಹತ್ತರ ಒಳಗೆ ಸ್ಥಾನ ಪಡೆಯುವುದು.

ಐಎಸ್‌ಎಲ್‌ನಿಂದಾಗಿ ಭಾರತದಲ್ಲಿ ಫುಟ್‌ಬಾಲ್ ಕೋಲ್ಕತ್ತ, ಮುಂಬೈ ಮತ್ತು ದಕ್ಷಿಣದ ಸಾಂಪ್ರದಾಯಿಕ ನಗರಗಳನ್ನು ಮೀರಿ ಬೆಳೆಯುತ್ತಿದೆ. ಕೋಟ್ಯಂತರ ಅಭಿಮಾನಿಗಳನ್ನು ಗಳಿಸಿದೆ. ಈ ಟೂರ್ನಿಯಲ್ಲಿ ವಿದೇಶಿ ಆಟಗಾರರು, ವಿಶೇಷವಾಗಿ ದಕ್ಷಿಣ ಕೊರಿಯಾ ಮತ್ತು ಜಪಾನ್ ಉದಾಹರಣೆಗಳನ್ನು ಅನುಸರಿಸಿ ಭಾರತೀಯ ಪ್ರತಿಭೆಗಳು ಯೂರೋಪ್‌ಗೆ ಹೋಗುವುದು ಮುಂದಿನ ಸವಾಲಾಗಿದೆ. ಭವಿಷ್ಯದಲ್ಲಿ ಪ್ರತಿಷ್ಠಿತ ಯುರೋಪಿಯನ್ ಲೀಗ್‌ಗಳಲ್ಲಿ ಭಾರತೀಯ ಆಟಗಾರರನ್ನು ನೋಡುವುದು ದೇಶದ ಫುಟ್‌ಬಾಲ್ ಪ್ರೇಮಿಗಳ ಕನಸಾಗಿದೆ.

ಪ್ರತಿಕ್ರಿಯಿಸಿ: feedback@sudha.co.in